

# ಸಣ್ಣ ಕೆಲಸಗಳ ಮಹತ್ವ

ವಿರಾಜ ಮಂಗಲಗಿ

**‘ಕೆಲಸದಲ್ಲಿ ಕೌಶಲವೇ ಯೋಗ’** ಎಂಬ ಗೀತೆಯ ಮಾತನ್ನು ಇನ್ನಷ್ಟು ವಿಸ್ತರಿಸಿ, ಕರ್ಮಯೋಗದ ಆದರ್ಶವನ್ನು ಸ್ವಾಮೀಜಿ ಉಪದೇಶಿಸಿದ್ದಾರೆ. ಈ ಶ್ರೇಷ್ಠ ಉಪದೇಶವನ್ನು ಕರಗತ ಮಾಡಿಕೊಂಡು ನಮ್ಮ ಯುವಕರು ಇಂದು ಮುನ್ನಡೆಯಬೇಕು; ಭವ್ಯ ಭಾರತವನ್ನು ಕಟ್ಟಬೇಕು. ಈ ವಿಚಾರಗಳನ್ನು ಕುರಿತು ಚಿಂತನೆ ನಡೆಸಿರುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ‘‘ನನಗೆ ವಯಸ್ಸಾಗುತ್ತಾ ಬಂದಂತೆಲ್ಲ ನಾನು ಸಂಧಿಸುವ ಹಿರಿಯರು, ಮಹಾತ್ಮರು ಮೊದಲಾದವರು ಸಣ್ಣ ಕೆಲಸವನ್ನು ಹೇಗೆ ಮಾಡುತ್ತಾರೆ ಎಂಬುದನ್ನು ಗಮನಿಸುತ್ತೇನೆ.’’

‘‘ನೀವು ವ್ಯಕ್ತಿಯೊಬ್ಬನ ಚಾರಿತ್ರ್ಯದ ಬಗ್ಗೆ ತಿಳಿದುಕೊಂಡು ‘ಇವನು ಇಂಥವನು’ ಎನ್ನುವ ತೀರ್ಮಾನಕ್ಕೆ ಬರಬೇಕಾದರೆ ಅವನು ಮಾಡಿದ ಯಾವುದೇ ದೊಡ್ಡ ಕಾರ್ಯವನ್ನು ಮಾತ್ರ ಪರಿಶೀಲಿಸಿದರೆ ಸಾಲದು. ಎಂಥ ಸಾಮಾನ್ಯನೂ ಒಂದಲ್ಲ ಒಂದು ಅವಕಾಶ ದೊರೆತಾಗ ಮಹಾವೀರನಂತೆ ವರ್ತಿಸಬಹುದು. ಮನುಷ್ಯರು ದಿನದಿನವೂ ಮಾಡುವ ಸಾಮಾನ್ಯವೆಂದು ತೋರುವ ಕೆಲಸಗಳನ್ನು ಪರಿಶೀಲಿಸಿ. ಅವು ನಿಜವಾದ ಉನ್ನತ ಚಾರಿತ್ರ್ಯವನ್ನು ಕುರಿತು ಸ್ಪಷ್ಟ ಚಿತ್ರವನ್ನು ನೀಡಬಲ್ಲವು, ದೊಡ್ಡದೊಂದು ಅವಕಾಶ ಅಲ್ಪನನ್ನು ದೊಡ್ಡವನನ್ನಾಗಿಸಬಹುದು. ಆದರೆ ನಿಜವಾದ ಮಹಾತ್ಮನು ಎಲ್ಲಾ ಸಂದರ್ಭಗಳಲ್ಲೂ ಜನರು ಅವನನ್ನು ಪರಿಶೀಲಿಸಲಿ ಬಿಡಲಿ, ಒಂದೇ ಸಮನಾಗಿರುವನು’’ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಪ್ರತಿಯೊಂದು ಕೆಲಸವೂ ಪರಮಶ್ರೇಷ್ಠವಾದದ್ದು. ಯಾವ ಕೆಲಸದಲ್ಲೂ ಮೇಲು ಕೀಳೆಂಬುದಿಲ್ಲ. ಆದರೆ ವ್ಯಕ್ತಿಯ ಮನೋಭಾವ ಮತ್ತು ಸಾಮಾಜಿಕ ಪರಿಸರವು ಕೆಲಸದಲ್ಲಿ ಈ ವ್ಯತ್ಯಾಸವನ್ನುಂಟುಮಾಡುತ್ತದೆ. ನಾವು ಅತ್ಯಂತ ನಿಕೃಷ್ಟವೆಂದು ತಿಳಿಯುವ ಕೆಲಸವು ಸಮಾಜದ ದೃಷ್ಟಿಯಿಂದ ಅತಿ ಪ್ರಮುಖವಾಗಿರಬಹುದು. ಜಾಡಮಾಲಿಯ ಕೆಲಸ, ದೇಶವನ್ನು ಆಳುವವನಿಗಿಂತ ಕಡಿಮೆಯದೇನಲ್ಲ. ಆಳುವವನಾದರೂ ಕೆಲಸ ನಿಲ್ಲಿಸಬಹುದು. ಆದರೆ ಜಾಡಮಾಲಿ ಒಂದೇ ಒಂದು ದಿನ ಕೆಲಸ ನಿಲ್ಲಿಸಿದರೆ ಸಮಸ್ತ ನಗರವೇ ಕೊಳೆಯಾಗುತ್ತದೆ.

ನಮ್ಮ ಪಾಲಿಗೆ ಬಂದ ಪ್ರತಿಯೊಂದು ಸಣ್ಣಪುಟ್ಟ ಕೆಲಸಗಳನ್ನು ಅತ್ಯಂತ ಶಿಸ್ತುಬದ್ಧವಾಗಿ ದಕ್ಷತೆಯಿಂದ ಮಾಡಿದಾಗಲೇ ದೊಡ್ಡ ಕೆಲಸವನ್ನೂ ಸರಿಯಾಗಿ ಮಾಡಬಹುದು. ಕಾರಣ ಪ್ರತಿಯೊಂದು ಸಣ್ಣ ಕೆಲಸವೂ ದೊಡ್ಡ ಕೆಲಸಗಳಿಗೆ ಪ್ರೇರಕವಾಗಿದೆ. ಯಂತ್ರದಲ್ಲಿ ಹೇಗೆ ಒಂದು ಚಕ್ರ (gear) ಮತ್ತೊಂದು ಚಕ್ರಕ್ಕೆ ಅಥವಾ ಯಂತ್ರ ರಚನೆಗೆ (mechanism) ಆಶ್ರಯವಾಗುತ್ತದೋ ಹಾಗೆಯೇ ನಾವು ಮಾಡುವ ಪ್ರತಿಯೊಂದು ಕೆಲಸವೂ ಮತ್ತೊಂದು ಕೆಲಸಕ್ಕೆ ಸಹಾಯ ಮಾಡುತ್ತದೆ. ನಾವು ಎಷ್ಟೋ ವೇಳೆ ದೊಡ್ಡ ಕಾರ್ಯಗಳನ್ನು ಸಾಧಿಸುವ ಪ್ರಯತ್ನದಲ್ಲೋ ಅಥವಾ ಬೇರೆಯವರನ್ನು ಚಕಿತಗೊಳಿಸುವ ಸಾಹಸದಲ್ಲೋ, ಸಣ್ಣ ಕೆಲಸ ಕಾರ್ಯಗಳನ್ನು ನಿರ್ಲಕ್ಷಿಸಿ ಅಯಶಸ್ಸನ್ನು ಕಂಡು ಹತಾಶರಾಗುತ್ತೇವೆ.

ಆದರೆ ಸಾವಿರ ಮೈಲಿಯ ಯಾತ್ರೆ ಒಂದೊಂದು ಹೆಜ್ಜೆಯಿಂದ ಪ್ರಾರಂಭವಾಗುತ್ತದೆ. ಸಾವಿರಾರು ಪುಟಗಳ ಗ್ರಂಥ ಒಂದೊಂದು ಅಕ್ಷರದಿಂದ ಪ್ರಾರಂಭವಾಗುತ್ತದೆ. ಬೃಹತ್ ಪ್ರಮಾಣದ ದೇವಸ್ಥಾನ ಒಂದೊಂದು ಇಟ್ಟಿಗೆಯಿಂದ ನಿರ್ಮಾಣವಾಗುತ್ತದೆ.

ಭಗವದ್ಗೀತೆ ೭೦೦ ಶ್ಲೋಕಗಳನ್ನೊಳಗೊಂಡ ಪ್ರಮುಖವಾದ ಗ್ರಂಥ. ಪ್ರತಿದಿನವೂ ಒಂದೊಂದು ಶ್ಲೋಕವನ್ನು ಕಂಠಪಾಠ

ಮಾಡುತ್ತ, ಅಧ್ಯಯನ-ಮನನ ಮಾಡುವುದರಿಂದ ೨ ವರ್ಷಗಳಲ್ಲಿ ಇಡೀ ಭಗವದ್ಗೀತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು. ಸ್ವಾಮಿ ವಿವೇಕಾನಂದರ ಜೀವನ ಮತ್ತು ೯ ಸಂಪುಟಗಳ ಕೃತಿಶ್ರೇಣಿಯನ್ನು ಪ್ರತಿನಿತ್ಯ ಕೆಲವು ಪುಟಗಳನ್ನು ಆಳವಾಗಿ ಅಧ್ಯಯನ ಮಾಡುತ್ತ ಹೋದಂತೆಲ್ಲ ೨ ವರ್ಷಗಳಲ್ಲಿ ಅವುಗಳ ಸಾರಾಂಶವನ್ನು ನಮ್ಮದಾಗಿಸಿಕೊಳ್ಳಬಹುದು. ಎಲ್ಲ ದೊಡ್ಡ ಕೆಲಸಗಳೂ ಸಣ್ಣ ಕೆಲಸಗಳ ಮೊತ್ತ. ಸಣ್ಣ ಕೆಲಸಗಳನ್ನು ಪೂರ್ಣ ಮನಸ್ಸಿನಿಂದ ಮಾಡಲು ಸಮರ್ಥರಾದರೆ ದೊಡ್ಡ ಕೆಲಸವನ್ನೂ ಸರಿಯಾಗಿ ಮಾಡುತ್ತ ಯಶಸ್ಸನ್ನು ಪಡೆಯಬಹುದು.

ಪ್ರಸಿದ್ಧ ಶಿಲ್ಪಿಕಲಾವಿದ ಮೈಕೇಲ್ ಎಂಜೆಲೋನ ಕಲಾಕೇಂದ್ರಕ್ಕೆ ಕಲಾಪ್ರೇಮಿಯೊಬ್ಬನು ಭೇಟಿಮಾಡಿದನು. ಮೈಕೇಲ್ ತಾನು ಸದ್ಯ ತಯಾರಿಸುತ್ತಿದ್ದ ಮೂರ್ತಿಯನ್ನು ಕುರಿತು ವಿವರಿಸುತ್ತಿದ್ದ. ಆ ಮೂರ್ತಿಯ ನಿರ್ಮಾಣಕಾರ್ಯವನ್ನು ನೋಡಲು ಅವನು




ಹಿಂದೊಮ್ಮೆ ಬಂದಿದ್ದನು. ಅವನು ಬಂದುಹೋದ ದಿನದಿಂದ ಇಲ್ಲಿಯವರೆಗೂ ಏನೆಲ್ಲ ಅಭಿವೃದ್ಧಿಯ ಕೆಲಸಗಳು ನಡೆದವು ಎಂಬುದನ್ನು ಮೈಕೇಲ್ ವಿವರಿಸತೊಡಗಿದ: ''ಆ ಭಾಗವನ್ನು ಸ್ವಲ್ಪ ಬದಲಿಸಿದೆ. ಕೈಗಳ ಮಾಂಸಖಂಡ ಬಲಿಷ್ಠವಾಗಿ ತೋರುವಂತೆ ಮಾಡಿದೆ. ಕಣ್ಣುಗಳಲ್ಲಿ ಭಾವಪ್ರಕಾಶವಾಗುವಂತೆ, ತುಟಿಗಳಲ್ಲಿ ಸ್ವಲ್ಪ ಮುಗುಳ್ನಗೆ ಎದ್ದು ಕಾಣುವಂತೆ ಮಾಡಿದೆ. ಕಾಲುಗಳು ಶಕ್ತವಾಗಿ ಕಾಣುವಂಥ ಕೆತ್ತನೆಯ ಕೆಲಸ ಅಲ್ಪಸ್ವಲ್ಪ ನಡೆಯಿತು'' ಎಂದನು. ಕಲಾಪ್ರೇಮಿ, ''ಓಹ್! ಇಷ್ಟು ದಿನವೂ ಅತಿ ಸಾಮಾನ್ಯವಾದ ಈ ಸಣ್ಣ ಪುಟ್ಟ ಕೆಲಸಗಳನ್ನು ಮಾತ್ರ ಮಾಡಿರುವಿರಾ? ಎಂದು ಉದ್ಗರಿಸಿದನು. ಮೈಕೇಲ್ ಅರ್ಥ ಪೂರ್ಣವಾಗಿ ನಕ್ಕು ಹೇಳಿದ; ''ನೆನಪಿರಲಿ, ಸಾಮಾನ್ಯವೆನಿಸುವ ಈ ಸಣ್ಣ ಪುಟ್ಟ ಕೆಲಸಗಳಿಂದ 'ಪರಿಪೂರ್ಣತೆ' ಉಂಟಾಗುತ್ತದೆ. ಆದರೆ ಪರಿಪೂರ್ಣತೆ ಎನ್ನುವುದು ಸಾಮಾನ್ಯವಲ್ಲ.''



ರಾಮಕೃಷ್ಣ ಮಹಾಸಂಘದಲ್ಲಿ ಒಬ್ಬ ಹಿರಿಯ ಯತಿಗಳು ಹೇಳುತ್ತಿದ್ದರಂತೆ; ''ಯಾರಿಗೆ ಸರಿಯಾಗಿ ತರಕಾರಿ ಹೆಚ್ಚಲು ಬರುತ್ತದೆಯೊ, ಅಂದರೆ ತರಕಾರಿಯ ಪ್ರತಿಯೊಂದರ ಗಾತ್ರ ಒಂದೇ ಸಮನಾಗಿರುತ್ತದೆಯೊ ಅವರು ಸರಿಯಾದ ರೀತಿಯಲ್ಲಿ ಧ್ಯಾನ-ಜಪ ಮಾಡಬಹುದು'' ಎಂದು. ಪ್ರತಿಯೊಂದು ಕೆಲಸವನ್ನೂ ಪೂರ್ಣ ಮನಸ್ಸಿನಿಂದ, ಏಕಾಗ್ರತೆಯಿಂದ ಮಾಡಲು ನಮಗೆ ಸಾಧ್ಯವಾದರೆ, ಆಧ್ಯಾತ್ಮಿಕ ಸಾಧನೆಯೆಂಬ ಮೇರುಶಿಖರವನ್ನು ಅಷ್ಟೇ ಏಕಾಗ್ರತೆಯಿಂದ ತಲುಪಬಹುದು. ಹೀಗೆ ಮಾಡುತ್ತ ಹೋದಂತೆಲ್ಲ ನಮ್ಮ ಮನಸ್ಸಿಗೆ ಒಂದು ತರಬೇತಿ ಕೊಟ್ಟಂತಾಗುತ್ತದೆ. ಬಾಹ್ಯ ಕೆಲಸವನ್ನೇ ನಾವು ಸರಿಯಾಗಿ ಮಾಡಲು ಸಾಧ್ಯವಾಗದಿದ್ದಾಗ, ಇನ್ನು ಆಂತರ್ಯದ ವಿಕಾಸವನ್ನು ಹೇಗೆ ತಾನೇ ಸರಿಯಾಗಿ ನಿರ್ವಹಿಸಬಲ್ಲೆವು?

ಒಬ್ಬ ಬಾಲಕ. ಅವನು ಬಡತನದಲ್ಲಿಯೇ ಹುಟ್ಟಿ ಬೆಳೆದಿದ್ದ. ಪ್ರತಿದಿನ ಮನೆಯಿಂದ ಹೊರಗೆ ಹೋಗಿ ಚಿಕ್ಕಚಿಕ್ಕ ಮರದ ಕೊಂಬೆಗಳನ್ನು ಅವನು ಅದೆಷ್ಟು ಅಚ್ಚುಕಟ್ಟಾಗಿ ಜೋಡಿಸುತ್ತಿದ್ದನೆಂದರೆ, ಅದನ್ನು ಹಿಂದುಗಡೆಯಿಂದ ನೋಡಿದ ಒಬ್ಬ ಆಗರ್ಭ ಶ್ರೀಮಂತ ಯೋಚಿಸುತ್ತಾನೆ: ''ಸಣ್ಣ ಕೆಲಸವನ್ನು ಈ ಬಾಲಕ ಇಷ್ಟು ಅಚ್ಚುಕಟ್ಟಾಗಿ ಮಾಡಬೇಕಾದರೆ ಅವನ ಮನಸ್ಸು ಅದೆಷ್ಟು ಶಿಸ್ತುಬದ್ಧವಾಗಿರಬೇಕು!'' ಈ ಶ್ರೀಮಂತನೇ ಆ ಬಾಲಕನ ವಿದ್ಯಾಭ್ಯಾಸದ ಪೂರ್ತಿ ಜವಾಬ್ದಾರಿಯನ್ನು ವಹಿಸಿಕೊಂಡ. ಮುಂದೆ ಆ ಬಾಲಕನೇ ಖ್ಯಾತ ಗಣಿತಜ್ಞ ಪೈಥಾಗೋರಸ್ ಆದ.




ಸಮಾಜದಲ್ಲಿ ಎಷ್ಟೋ ಜನ 'ಎಲೆ ಮರೆಯ ಕಾಯಿಯಂತೆ' ಕೆಲಸ ಮಾಡುತ್ತಿರುತ್ತಾರೆ. ಅವರು ಬೆಳಕಿಗೆ ಬರುವುದು ತುಂಬಾ ಅಪರೂಪ ಮತ್ತು ಅವರು ಅದನ್ನು ಬಯಸುವುದೂ ಇಲ್ಲ. ಅವರ ಪ್ರತಿಯೊಂದು ಕಾರ್ಯವು ಸಮಾಜದ ಮೇಲೆ ಬೆಳಕನ್ನು ಬೀರುತ್ತದೆ. ಇದಕ್ಕೆ ಜೀವಂತ ನಿದರ್ಶನ ಶ್ರೀರಾಮಕೃಷ್ಣ-ಶ್ರೀಮಾತೆಯವರ ಜೀವನ. ತಮ್ಮ ಜೀವನದ ಪ್ರತಿಯೊಂದು ಸಣ್ಣಪುಟ್ಟ ಕೆಲಸಕಾರ್ಯಗಳಿಂದ ಹಿಡಿದು ಮಹತ್ಸಾಧನೆಯವರೆಗೆ, ತರಕಾರಿ ಹೆಚ್ಚುವುದರಿಂದ ಹಿಡಿದು ಬ್ರಹ್ಮಜ್ಞಾನದವರೆಗೆ ಅವರು ಯಾವ ರೀತಿಯ ಪರಿಪೂರ್ಣತೆಯನ್ನು ವ್ಯಕ್ತಪಡಿಸಿದರು ಎಂಬುದು ಅಸಾಧಾರಣವಾದ ಕಥೆ. ಅವರ ಜೀವನದ ಪ್ರತಿಯೊಂದು ಸಣ್ಣಪುಟ್ಟ ಘಟನೆಗಳೂ ಇತರರ ಜೀವನವನ್ನು ಪ್ರಭಾವಿಸಬಲ್ಲುದು.

ಶ್ರೀರಾಮಕೃಷ್ಣರ ಮನಸ್ಸು ಪ್ರತಿಕ್ಷಣವೂ ಭಗವದ್ಭಾವದಲ್ಲಿ ಲೀನವಾಗಿದ್ದರೂ; ಅವರು ಪ್ರತಿಯೊಂದು ಕೆಲಸದಲ್ಲಿ ಪರಿಪೂರ್ಣತೆಯನ್ನು ಸಾಧಿಸಿದ್ದರು. ತಮ್ಮ ಸಹಧರ್ಮಿಣಿ ಶ್ರೀಶಾರದಾ

ದೇವಿಯವರಿಗೆ ದೈನಂದಿನ ಜೀವನವನ್ನು ಅತ್ಯುತ್ಕೃಷ್ಟ ರೀತಿಯಲ್ಲಿ ನಡೆಸಲು ಬೇಕಾದ ಸಣ್ಣಪುಟ್ಟ ಕೆಲಸಕಾರ್ಯಗಳಿಂದ ಹಿಡಿದು, ಅತ್ಯುನ್ನತ ಆಧ್ಯಾತ್ಮಿಕ ಸಾಧನೆಗಳ ಬಗ್ಗೆ ಶಿಕ್ಷಣವನ್ನು ನೀಡಿದರು. ಬತ್ತಿಯನ್ನು ಹುರಿಗೊಳಿಸಿ ದೀಪ ಹಚ್ಚುವುದು, ತಾಂಬೂಲ ತಯಾರಿಸುವುದು, ಸರಿಯಾದ ಪ್ರಮಾಣದಲ್ಲಿ ಸಾಂಬಾರ ಪದಾರ್ಥಗಳನ್ನು ಉಪಯೋಗಿಸಿ ಅಡಿಗೆಗೆ ಒಗ್ಗರಣೆ ಕೊಡುವುದು — ಇಂತಹ ಚಿಕ್ಕಪುಟ್ಟ ಕೆಲಸಗಳನ್ನೂ ಕೂಡ ಅತ್ಯುತ್ತಮ ರೀತಿಯಲ್ಲಿ ನಿರ್ವಹಿಸುವುದು ಹೇಗೆ ಎಂಬುದನ್ನು ತೋರಿಸಿ ಕೊಟ್ಟರು.


ಸ್ವಾಮಿ ಶಿವಾನಂದರು (ಮಹಾಪುರುಷ್‌ಜೀ ಮಹಾರಾಜ್) ಬಾರಾನಗರ ಮಠದಲ್ಲಿದ್ದಾಗ ತಮ್ಮ ಧ್ಯಾನ ತಪಸ್ಸನ್ನು ಯಾವ ಉತ್ಕಟವಾದ ಭಾವನೆಯಿಂದ ಮಾಡುತ್ತಿದ್ದರೊ, ಹಾಗೆಯೇ ಮಠದ ಎಲ್ಲ ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು — ನೈವೇದ್ಯಕ್ಕೆ ತರಕಾರಿ ಹಣ್ಣುಗಳನ್ನು ಹೆಚ್ಚುವುದು, ಗಂಗೆಯಿಂದ ನೀರನ್ನು ತುಂಬಿಕೊಂಡು ಬರುವುದು, ಮಠವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಶೌಚಾಲಯಗಳನ್ನು ತೊಳೆಯುವುದು ಇವನ್ನೂ ಅಷ್ಟೇ ಶ್ರದ್ಧಾಭಕ್ತಿಯಿಂದ ಮಾಡುತ್ತಿದ್ದರು.



ಶ್ರೀರಾಮಕೃಷ್ಣ ಆಶ್ರಮಗಳಲ್ಲಿ ದಿವ್ಯತ್ರಯರ ಜಯಂತ್ಯುತ್ಸವ ಮತ್ತಿತರ ಹಬ್ಬಹರಿದಿನಗಳಲ್ಲಿ ದಿವ್ಯತ್ರಯರ ಹಾಗೂ ಇತರ ದೇವದೇವತೆಗಳ ಭಾವಚಿತ್ರಗಳಿಗೆ ತುಂಬಾ ಸುಂದರವಾಗಿ ಅಚ್ಚುಕಟ್ಟಾಗಿ ಹೂವಿನ ಹಾರವನ್ನು ಅಲಂಕರಿಸುವುದನ್ನು ನಾವು ಗಮನಿಸಬಹುದು. ಅಷ್ಟೊಂದು ದೊಡ್ಡ ಗಾತ್ರದ ಭಾರವಾದ ಹೂವಿನ ಹಾರವನ್ನು ವಿವಿಧವಿನ್ಯಾಸಗಳಿಂದ ಜೋಡಿಸುವುದನ್ನು ನೋಡಿದಾಗ ಮನಸ್ಸಿಗೆ ಆನಂದದ ಜೊತೆಜೊತೆಗೆ ಆಶ್ಚರ್ಯವೂ ಆಗುತ್ತದೆ. ಆದರೆ ಸ್ವಲ್ಪ ಸೂಕ್ಷ್ಮವಾಗಿ ಅವಲೋಕಿಸಿದಾಗ ಭಾವಚಿತ್ರದ ಹಿಂದುಗಡೆ ಅನೇಕ ಮೊಳೆಗಳು ಮತ್ತು ದಾರದ ಸಹಾಯವಿರುತ್ತದೆ. ಆ ಮೊಳೆ ನಮ್ಮ ಕಣ್ಣಿಗೆ ಕಾಣುವುದೇ ಇಲ್ಲ. ನೆಲವನ್ನು ಸ್ವಚ್ಛಗೊಳಿಸುವ ಪೊರಕೆ ತನ್ನಲ್ಲ ಕೆಲಸ ಮುಗಿಸಿದ ಮೇಲೆ ಮನೆಯ ಯಾವುದೋ ಒಂದು ಮೂಲೆಯನ್ನು ಸೇರುತ್ತದೆ. 'ಇದೇನು, ಪೊರಕೆ?' ಅಂತ ನಾವು ಕಡೆಗಣಿಸುವ ಹಾಗಿಲ್ಲ. ಆ ಪೊರಕೆಯಿಲ್ಲದಿದ್ದರೆ ನಮ್ಮ ಅನೇಕ ಬೆಲೆಬಾಳುವ ಬಟ್ಟೆ ವಸ್ತುಗಳು ಕೊಳೆಯಾಗುವುದು ಖಚಿತ. ದೊಡ್ಡ ಯಂತ್ರ ಯಾವುದೋ ಒಂದು ಸಣ್ಣ ಸ್ಕ್ರೂಮೊಳೆಯ ಅಭಾವದಿಂದ ಚಲಿಸಲು ಸಾಧ್ಯವಿಲ್ಲದಂತಾಗುತ್ತದೆ. ಹೀಗೆ ಪ್ರತಿಯೊಂದು ಸಣ್ಣಪುಟ್ಟ ವಸ್ತುಗಳನ್ನೂ ನಾವು ನಿರ್ಲಕ್ಷ್ಯ ಮಾಡುವಂತಿಲ್ಲ.

ಜಗತ್ತಿನ ಪ್ರತಿಯೊಂದು ಮಹತ್ಸಾಧನೆಯೂ ಸಣ್ಣ ಕೆಲಸಗಳ ಮೊತ್ತ. ಆದ್ದರಿಂದ ಸಣ್ಣ ಕೆಲಸಗಳನ್ನು ಕಡೆಗಣಿಸುವುದು ಬೇಡ. ಸಣ್ಣ ಕೆಲಸಗಳೇ ದೊಡ್ಡ ಕೆಲಸಗಳ ತಳಹದಿಯಾಗಿರುತ್ತದೆ. ಸಣ್ಣ ಕೆಲಸಗಳನ್ನು ಶಿಸ್ತುಬದ್ಧವಾಗಿ ಮಾಡುತ್ತ ಹೋದಂತೆಲ್ಲ ನಮ್ಮ ಮನಸ್ಸು ಸುಸಂಸ್ಕೃತವಾಗುತ್ತದೆ, ಸುಶಿಕ್ಷಿತವಾಗುತ್ತದೆ ಮತ್ತು ಮಹತ್ಕಾರ್ಯಗಳನ್ನು ಸಾಧಿಸುವ ಯೋಗ್ಯತೆ ಬರುತ್ತದೆ. ಹೀಗೆ ನಾವು ನಮ್ಮ ದೈನಂದಿನ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ, ಶ್ರದ್ಧೆಯಿಂದ ಮಾಡುತ್ತ ದಿವ್ಯತ್ರಯರು ತೋರಿಸಿಕೊಟ್ಟ ಮಾರ್ಗದಲ್ಲಿ ನಮ್ಮ ಜೀವನವನ್ನು ಮುನ್ನಡೆಸೋಣ. ✷

## ಯುವಚೇತನ



''ಪ್ರತಿಯೊಬ್ಬನಿಗೂ ತನ್ನದೇ ಆದ ಒಂದು ವಿಶಿಷ್ಟ ಸ್ವಭಾವವಿದೆ. ಅವನು ಆ ಸ್ವಭಾವವನ್ನು ಅನುಸರಿಸಬೇಕು. ಅವನಿಗೆ ಅದರ ಮೂಲಕ ಮುಕ್ತಿ ದೊರಕುವುದು. ನಿಮ್ಮ ಸ್ವಭಾವಕ್ಕೆ ತಕ್ಕ ಮಾರ್ಗ ಯಾವುದು ಎಂಬುದನ್ನು ನಿಮ್ಮ ಗುರು ಹೇಳಬಲ್ಲವನಾಗಿರಬೇಕು ಮತ್ತು ನಿಮ್ಮನ್ನು ಆ ಮಾರ್ಗದಲ್ಲಿ ನಡೆಸಬೇಕು. ಅವನು ನಿಮ್ಮ ಮುಖವನ್ನು ನೋಡಿದೊಡನೆಯೇ ನೀವು ಯಾವ ಮಾರ್ಗಕ್ಕೆ ಯೋಗ್ಯರು ಎಂಬುದನ್ನು ಅರಿತು ನಿಮಗೆ ಅದನ್ನು ತೋರಬಲ್ಲವನಾಗಿರಬೇಕು. ನೀವು ಮತ್ತೊಬ್ಬನ ಮಾರ್ಗವನ್ನು ಅನುಸರಿಸಕೂಡದು. ಏಕೆಂದರೆ ಅದು ಅವನ ಮಾರ್ಗ, ನಿಮ್ಮದಲ್ಲ. ನಿಮ್ಮ ಮಾರ್ಗವನ್ನು ಅವನು ಅನುಸರಿಸಕೂಡದು. ಏಕೆಂದರೆ ಅದು ನಿಮ್ಮ ಮಾರ್ಗ, ಅವನದಲ್ಲ. ನಿಮ್ಮ ಮಾರ್ಗವನ್ನು ನೀವು ಅರಿತ ಮೇಲೆ ಆ ಮಾರ್ಗದ ಮೇಲೆ ತೇಲಿಕೊಂಡುಹೋದರೆ ಸಾಕು, ಅದು ನಿಮ್ಮನ್ನು ಮುಕ್ತಿಗೆ ಒಯ್ಯುವುದು. ನೀವು ಅದನ್ನು ಅರಿತ ಮೇಲೆ ಅದರಿಂದ ಕದಲಬೇಡಿ. ನಿಮ್ಮ ಮಾರ್ಗವೇ ನಿಮಗೆ ಒಳ್ಳೆಯದು. ಆದರೆ ಅದು ಎಲ್ಲರಿಗೂ ಒಳ್ಳೆಯದಲ್ಲ.''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ೭, ಪು.೨೮೮)*